Ruling by the Chair

Shri. Mallikarjuna Kharge and others have given notice under Rule 68 to raise a discussion on what has come to be known as the phone tapping episode.

The issue has gained importance and currency after a Committee of Rajya Sabha submitted its report recently. It is a time honoured convention that a report presented to the Parliament could not become a subject matter of discussion in this august House.

This matter was discussed in the Eighth Assembly as the then Government was alleged to be responsible for the phone tapping and the needle of suspicion pointing at the Former Chief Minister who is also an Hon ble Member of this House. It is claimed in the explanatory note submitted by Shri Kharge that the then Chief Secretary has in a written testimony before the committee has acknowledged that addition and deletion of names whose telephones are to be tapped were decided in consultation with the Chief Minister.

The intervention of two former Chief Ministers and the former Chief Secretary instead of Shedding any further light on the matter has only sharpened contours of the issue. The Statement of the Chief Secretary before the Parliamantary Committee which has now become a public document is to be taken note of.

The Chief Minister, I am sure would like to have his say in the matter to set at rest various speculative reports.

The subject matter in my opinion is of sufficient public importance which merits a discussion in the House.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಬೆಳಗಾಂ ಮಹಾನಗರಪಾಲಿಕೆಯವರು ಒಂದು ನಿರ್ಣಯವನ್ನು ಮಾಡಿದ್ದಾರೆ ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಬೇಕೆಂದು...

ಅಧ್ಯಕ್ಷರು.—ನಾನು ತಮ್ಮನ್ನು ಕರೆಯುತ್ತೇನೆ ತಾವು ಕುಳಿತುಕೊಳ್ಳಿ.

ನಿಯಮ ೬೮ರ ಮೇರೆಗೆ ದೂರವಾಣಿ ಕದಾಲಿಕೆಯ ಬಗ್ಗೆ ಪ್ರಸ್ತಾವನೆ

† ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ತಾವು ತಮ್ಮ ನಿರ್ಣಯವನ್ನು ಕೊಟ್ಟಿದ್ದೀರಿ ಅದರ ಮೇಲೆ ನಾನು ಚರ್ಚೆ ಮಾಡುವುದಕ್ಕೆ ಪೂರಕವಾದಿಲ್ಲ ಏಕೆಂದರೆ ತಮ್ಮ ನಿರ್ಣಯವೇ ಅಂತಿಮವಾದ ನಿರ್ಣಯ ಆದರೆ ನನಗೆ ಆ ಚರ್ಚೆಯನ್ನು ಯಾವಸ್ವರೂಪದಲ್ಲಿ ಮಾಡಬೇಕು ಎನ್ನ ತಕ್ಕಂಥಾದ್ದನ್ನು ತಾವೇ ಹೇಳಬೇಕಂ ಈಗ ಮೇಲಿನ ಮನೆಯಲ್ಲಿ ಚರ್ಚೆಯನ್ನು ಇನ್ನೊಂದು ರೂಪದಲ್ಲಿ ತೆಗೆದುಕೊಂಡಿದ್ದಾರೆ ಇಲ್ಲಿ ತಾವೇ ಹೇಳಿದ್ದೀರಿ ಏನೆಂದರೆ, ಸಂಸತ್ತಿನ ಯಾವುದೇ ಒಂದು ವರದಿಯನ್ನು ಚರ್ಚೆ ಮಾಡ ತಕ್ಕಂಥ ಕನ್‌ವೆನ್‌ಷನ್ ಇಲ್ಲ ಎಂದು, ಆದ್ದರಿಂದ ಇದರಲ್ಲಿ ಚರ್ಚೆ ಮಾಡತಕ್ಕಂಥ ವಿಷಯ ಏನು ಎಂದು ನನಗೆ ಗೊತ್ತಾಗಲಿಲ್ಲ. There are 3/4 issues connected ತಮಗೆ ಆಗಲೇ ಹಿಂದಿನ ಸಾರಿ ಹೇಳಿದ್ದೆ ಕಾಂಡಕ್ಟ್ ಆಫ್ ದಿ ಮೆಂಬರ್ ಬಗ್ಗೆ ಇಲ್ಲಿ ಚರ್ಚೆ ಮಾಡುವುದಾದರೆ ಅದನ್ನು ಮಾಡ ಬಹುದು. ಅವರಿಗೆ ನೋಟೀಸ್ ಕೊಟ್ಟು ಕರೆದು ಚರ್ಚೆ ಮಾಡಬಹುದು. ಕಾಂಡಕ್ಟ್ ಆಫ್ ದಿ ಚೀಫ್ ಸೆಕ್ರೆಟರಿ ಬಗ್ಗೆ ಚರ್ಚೆ ಮಾಡುವುದಾದರೆ ಅದನ್ನು ಮುಖ್ಯ ಮಂತ್ರಿಯವರೆಗೆ ಬಿಡುತ್ತೇನೆ ಆಡಳಿತದ ವ್ಯವಸ್ಥೆಗೆ ಸೇರಿದಂಥ ವ್ಯವಸ್ಥೆಯ ಸ್ವರೂಪವನ್ನು ಅರ್ಥಮಾಡಿಕೊಂಡು ಚರ್ಚೆ ಮಾಡ

ಬೇಕಾಗುತ್ತದೆ ಇಲ್ಲದಿದ್ದರೆ, ಇದು ಯಾರಿಗಾದರೂ ಪ್ರಿವಿಲೆಜ್ ಆಗಿದೆಯೆಂದರೆ ಅದನ್ನು ಕೂಡ ಯಾವ ರೀತಿಯಲ್ಲಿ ಚರ್ಚೆ ಮಾಡಬೇಕು ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ ಆದರೆ ಇಲ್ಲಿ ಚರ್ಚೆಯ ಸ್ವರೂಪ ಏನು, ಹಾಗೂ ವಿಷಯ ಏನು ಎಂದು ತಿಳಿದುಕೊಳ್ಳಬೇಕಾಗುತ್ತದೆ ಸುಮ್ಮನೆ ಪಬ್ಲಿಕ್ ಇಂಟರೆಸ್ಟ್ ಇದೆ ಎಂದು ಚರ್ಚೆ ಮಾಡುವುದಕ್ಕಾಗುವುದಿಲ್ಲ ಯಾವುದಾದರೂ ಸ್ಪೆಸಿಫಿಕ್ ಇಶ್ಯೂ ಇರಬೇಕು. What is that specific issue to be discussed ? ಆ ಚೌಕಟ್ಟನ್ನು ಹಾಕದಿದ್ದರೆ ಆ ಚೌಕಟ್ಟನ್ನು ಮೀರಿ ನಾವು ಚರ್ಚೆಗೆ ಹೋಗುತ್ತೇವೆ. ಬಹುಶಃ ಶಾಸನ ಸಭೆ ಮತ್ತು ಸಂಸತ್ತಿನ ಒಂದು ಸಮರಕ್ಕೆ ಈ ಚರ್ಚೆ ನಾಂದಿಯಾಗಬಹುದು ಅದು ಆಗಬಾರದೆಂದಿದ್ದರೆ ನಾನು ತಮ್ಮಿಂದ ಬಯಸುವುದೇನೆಂದರೆ, ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಬೇಕೆಂಬ ಬಗ್ಗೆ ತಾವು ಆದೇಶ ಕೊಡುತ್ತೀರೆಂದು ನಾವು ನಿರೀಕ್ಷಣೆ ಮಾಡುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈಗ ತಾವು ಟೆಲಿಫೋನ್ ಟ್ಯಾಪಿಂಗ್ ಪ್ರಕರಣದ ಬಗ್ಗೆ ಅನೇಕ ರಾಷ್ಟ್ರ ಮಟ್ಟದ ಮತ್ತು ಇಲ್ಲಿಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದರಿಂದ ಇದು ಬಹಳ ಮಹತ್ವವಾದ ವಿಚಾರವಾದ್ದರಿಂದ ಇಲ್ಲಿ ಚರ್ಚೆಯಾಗಬೇಕೆಂಬ ಅರ್ಥದಲ್ಲಿ ತಾವು ನಿರ್ಣಯ ಕೊಟ್ಟಿದ್ದೀರಿ. ತಮ್ಮ ನಿರ್ಣಯಕ್ಕೆ ನಾವುಗಳು ತಲೆಬಾಗಬೇಕಾಗುತ್ತದೆ, ನಿಮ್ಮ ನಿರ್ಣಯ ಪ್ರಶ್ನಾತೀತ. ಅದನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಆದರೆ ಮಾನ್ಯ ಗೌರವಾನ್ವಿತ ಸದಸ್ಯರು ರೂಲ್ ೬೮ ಪ್ರಕಾರ ಚರ್ಚೆಯಾಗಬೇಕೆಂದು ಇದರ ಬಗ್ಗೆ ನೋಟೀಸ್ ಏನು ಕೊಟ್ಟಿದ್ದಾರೆ, ಇದರ ಚರ್ಚೆಗೆ ವಿಷಯ ಏನು ಎಂಬುದು ಮುಖ್ಯವಾದದು ಚರ್ಚೆ ಮಾಡುವುದು ಏನನ್ನು ? ಸದನದ ಯಾವ ದಾದರು ಸದಸ್ಯರ ಹಕ್ಕು ಚ್ಯುತಿಗೆ ಏನಾದರು ಬಾಧ್ಯತೆ ಆಗಿದೆಯೇ ? ಅಥವಾ ಯಾವುದಾದರೂ ಒಬ್ಬರು ಸದಸ್ಯರು ಸರಿಯಾಗಿ ನಡೆದುಕೊಂಡಿಲ್ಲವೇ ? ತಾವೇ ತಮ್ಮ ತೀರ್ಪಿನಲ್ಲಿ ಏನು ಹೇಳಿದ್ದೀರಿ. ರಾಜ್ಯ ಸಭೆ ಸಮಿತಿ ಏನು ವರದಿ ಕೊಟ್ಟಿದೆ, ಆ ವರದಿಯನ್ನು ಚರ್ಚೆ ಮಾಡಬಾರದೆಂದು ನಾನು ಹೇಳುವುದಿಲ್ಲ. ನಾನು ಮೊದಲನೆಯ ದಿವಸವೇ ಈ ಮಾತನ್ನು ಹೇಳಿದೆ. ನಮ್ಮ ನಾಯಕರು ಇವತ್ತು ಬೇರೆ ಕಡೆ ಇದ್ದರೂ ನಾವು ಚರ್ಚೆಗೆ ಹೆದರುವುದಿಲ್ಲ. ನಮಗೆ ಯಾವ ಹೆದರಿಕೆಯೂ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಹಿತ ಅವೊತ್ತು to straighten the records ನಾನು ಏನೋ ಹೇಳಬೇಕೆಂದು ಇದ್ದೇನೆಂದು ಹೇಳಿದ್ದರು ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಭಾನಾಯಕರಾದ ಅವರು ಇದರಲ್ಲಿ ಏನಿದೆಯೆಂದು ಹೇಳಬೇಕಾಗುತ್ತದೆ. ಜೊತೆಗೆ ಇದು ಸಾರ್ವಜನಿಕವಾಗಿಯೂ ಸಹಿತ ಇಲ್ಲಿ ಏನು ನಡೆದಿದೆ ಅನೇಕ ಜನ ಸಂಶಯಕ್ಕೆ ಒಳಗಾಗಿದ್ದಾರೆ. ಇದು ಬಹಿರಂಗವಾಗಬೇಕೆಂದು ಹೇಳಿದ್ದಾರೆ ಇದು ಒಳ್ಳೆಯದು ನಾನು ಕೇಳುತ್ತೇನೆ ಈ ಚರ್ಚೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಆಗಬೇಕು ಹಾಗೂ ಯಾವ ಇತಿಮಿತಿಯೊಳಗೆ ಆಗಬೇಕೆಂದು ತಾವು ನಿಗದಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದೇ ವಿಷಯದ ಮೇಲೆ ನನ್ನ ಎರಡು ಮಾತುಗಳು.

ಅಧ್ಯಕ್ಷರು.—ಶ್ರೀ ಮಲ್ಲಿಕಾರ್ಜುನ ಖರ್ಗೆಯವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಈ ಚರ್ಚೆಯಲ್ಲಿ ಯಾವ ಮಹತ್ವವಾದ ವಿಷಯವಿದೆ ಎಂದು ಅವರು ಇವತ್ತಿನ ದಿವಸ ಕೇಳುತ್ತಿದ್ದಾರೆ ದಿನಾಂಕ ೫ ಅಕ್ಟೋಬರ್ ೧೯೮೮ ರಂದು ಇದೇ ಸದನದಲ್ಲಿ ನಾವು ಒಂದು ನಿಲುವಳಿ ಸೂಚನೆ ಮಂಡಿಸಿದಾಗ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಎಸ್.ಆರ್. ಬೊಮ್ಮಾಯಿಯವರು ಇದನ್ನು ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಬಾರದೆಂದು ಹೇಳಿ ಆಗತಕ್ಕಂಥ ಚರ್ಚೆಗೆ ಪೊಟಕಾಗೊಳಿಸಿದರು ತದನಂತರ ಇದನ್ನು ಯಾವುದಾದರೂ ಒಂದು ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮನವನ್ನು ಒಲಿಸಿಕೊಂಡಾಗ, ಸ್ವಲ್ಪ ಮಟ್ಟಿಗೆ ಅವರು ಚರ್ಚೆಗೆ ಅವಕಾಶ ಮಾಡಿಕೊಟ್ಟರು. ಆದರಲ್ಲಿ ಇರತಕ್ಕಂಥ ಮಹತ್ವವಾದಂಥ ವಿಷಯಗಳು ಏನೆಂದರೆ, ಚೀಫ್ ಸೆಕ್ರೆಟರಿ ಎಂದರೆ, ಆಗಿನ ಮುಖ್ಯ ಮಂತ್ರಿಯವರಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೊರಗಡೆ ಹೇಳಿಕೆ ಕೊಟ್ಟಿದೆ ಏನೆಂದರೆ, ನಾನಾಗಿ ಯಾವ ರಾಜಕಾರಣಿಗಳ ಒಂದು...

ಅಧ್ಯಕ್ಷರು.—ಈಗ ಅದಕ್ಕೆ ಏಕೆ ಹೋಗುತ್ತೀರಿ ?

SRI MALLIKARJUN KHARGE.—I am telling why this is important to discuss. This involves the personal liberty of individuals whose telephones have been tapped.

MR SPEAKER.—Even the Leader of Cpposition is not disputing the importance of the subject matter. He would like me to fix ud the parameters within which the debate should take place. I intend doing that.

SRI M. MALLIKARJUN KHARGE.—I am very thankful to you. Really this is worth discussing ಆದಕ್ಕಾಗಿ ಈಗಾಗಲೇ ಹಿಂದೆಯೂ ಕೂಡ ಅವರಿಗೆ ಗೊತ್ತಿದೆ Telegraph Act Section 5 of Clause 2...

ಅಧ್ಯಕ್ಷರು.—ಅವೆಲ್ಲವನ್ನು ಚರ್ಚೆಯ ಸಮಯದಲ್ಲಿ ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವೆಲ್ಲವುಗಳ ಪ್ರಕಾರ ನೋಡಿದರೆ, ಯಾವ ಮುಖ್ಯಮಂತ್ರಿಯವರು ಮೊದಲು ಹೇಳುತ್ತಾ ಇದ್ದರು, ನಾನು ಇದನ್ನು ಮಾಡಿಲ್ಲ, ನನ್ನ ನೋಟೀಸ್‌ಗೆ ಈ ವಿಚಾರ ಬಂದಿಲ್ಲ, ಎನ್ನುತ್ತಿದ್ದರೋ, ಅವರ ಮುಖ್ಯಕಾರ್ಯದರ್ಶಿಯವರೇ ಇವೊತ್ತಿನ ದಿನಸ ಎಲ್ಲವನ್ನೂ ಅವರ ನೋಟೀಸ್‌ಗೆ ತಂದು ಆವೊತ್ತು ಲಿಸ್ಟ್ ಪ್ರಿಪೇರ್ ಆಗಿದೆ ಎಂದು ಹೇಳುತ್ತಾ ಇದ್ದಾರೆ ವಿಷಯ ಹೀಗಿರುವಾಗ ಡಿಸ್‌ಕಶನ್ ಮಾಡತಕ್ಕಂಥ ಅವಶ್ಯಕತೆ ಇದ್ದೇ ಇದೆ. ಯಾವ ಕಾಂಟೆಸ್ಟ್‌ನಲ್ಲಿ ಆಗ ಅವರು ಹೇಳಿದ್ದರು, ಮತ್ತು ಆವೊತ್ತು ಚೀಫ್ ಸೆಕ್ರೆಟರಿಯವರು ಯಾವ ಕಾಂಟಿಸ್ಟ್‌ನಲ್ಲಿ ಅವರ ಕನ್‌ಸೆಂಟ್ ತೆಗೆದುಕೊಂಡು ನಾನು ಹೇಳುತ್ತಾ ಇದ್ದೇನೆ ಎಂದು ಹೇಳಿದ್ದಾರೆ. ಇದು ಮುಖ್ಯಕಾರ್ಯದರ್ಶಿಯವರು ಸಮಿತಿಯ ಮುಂದೆ ಹೇಳಿದ ವಿಚಾರ ಅದಕ್ಕಿಂತಲೂ ಮಹತ್ವವಾದದ್ದು ನಮ್ಮ ಪರ್‌ಸನಲ್ ಲಿಬರ್ಟಿ ಮತ್ತು ಪ್ರೈವೆಸಿ ವಿಚಾರವೂ ಇದರಲ್ಲಿ ಅಡಗಿದೆ ಯಾರಾದರೂ ಬ್ಲಾಕ್ ಮಾರ್ಕೆಟೀಯರ್ಸ್, ಸ್ಮಗಲರ್ಸ್‌ಗಳು ಇದ್ದರೆ ಅವರ ವಿಚಾರದಲ್ಲಿ ಮಾಡಲಿ Personal liberty and privacy of the Individuals is involved. Our privilege is involed How was telephone tapping done when there is no provision in the Act ? Only antisocial elements blackmarketers...

ಶ್ರೀ ಎಂ.ವಿ. ವೆಂಕಟಪ್ಪ.— ಅಧ್ಯಕ್ಷರೆ How can we discuss ? We must have sufficient material to discuss.

ಶ್ರೀ ವಾಟಾಳ್ ನಾಗರಾಜ್.—ತಾವುಗಳು ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದು ತುಂಬಾ ಸಂತೋಷದ ವಿಚಾರವೇ ಆಗಿದೆ. ಏಕೆಂದರೆ ಇದು ಬೆಳಕಿಗೆ ಬರಬೇಕಾದಂಥ ವಿಚಾರ ಮಾಜಿ ಮುಖ್ಯಮಂತ್ರಿಗಳಾಗಿದ್ದ ಪಾನ್ಸ್ ಬೊಮ್ಮಾಯಿಯವರು ಕೂಡ ಹೇಳಿದ್ದಾರೆ ಇದಕ್ಕೆ ಸಂಬಂಧಪಟ್ಟ ಎಲಾ ಕಡತಗಳನ್ನು ಈ ಸದನದ ಮುಂದೆ ಇಡಿ ಎಂದು ಹೇಳಿದ್ದಾರೆ. ಇಂಥ ಪ್ರಮುಖವಾದ ವಿಚಾರ ಚರ್ಚೆ ಮಾಡಬೇಕಾಗುತ್ತದೆ ಅಂತೆಯೇ ಈ ಸಂದರ್ಭದಲ್ಲಿ ಇದಕ್ಕೆ ರಾಜಕೀಯವಾಗಿ ಯಾವುದೇ ಪಕ್ಷಗಳು ಬೆಂಬಲ ಇದರಲ್ಲಿ ರಾಜಕೀಯ ಬರುತ್ತಿದೆ ಈ ಸಂದರ್ಭದಲ್ಲಿ ನಮ್ಮ ಉಪಪ್ರಧಾನಿಯವರು ಕೂಡ ಬೆಂಗಳೂರಿನಲ್ಲಿ ಪೊಕ್ಕಾಂ ಮಾಡಿದ್ದಾರೆ ಹಾಗಾಗಿ ಇದು ರಾಜಕೀಯ...

ಅಧ್ಯಕ್ಷರು.—ಅವರ ವಾಸ್ತವ್ಯಕ್ಕೂ ನಮಗೂ ಏನೂ ಸಂಬಂಧ ಇಲ್ಲ. ಇಲ್ಲಿ ಉಪಪ್ರಧಾನಿಯವರು ಪೊಕ್ಕಾಮ್ ಮಾಡುವುದಕ್ಕೂ ನಮ್ಮ ಕಾರ್ಯಕಲಾಪಗಳಿಗೂ ಯಾವ ರೀತಿಯ ಸಂಬಂಧವೂ

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಈಗ ರೂಲಿಂಗ್ ಕೊಟ್ಟಿದ್ದೀರಿ. ರ ಬಗ್ಗೆ ನಾವು ಯಾವ ನಿಯಮದ ಪ್ರಕಾರ ಮಾತನಾಡಬೇಕು ಯಾವ ದಿನ ಚರ್ಚೆ ಮಾಡಬೇಕು ನ್ನವುದನ್ನು ಬಿಎಸಿ ಯಲ್ಲಿ ನಿರ್ಣಯ ಮಾಡೋಣ. At the same time Members uire some material to discuss about this. It should be printed l distributed. ಇದ್ದರೆ ಕೊಡಲಿ.

MR. SPEAKER.—I will provide you all the material. All the terial that you need for the meaningful discussion of the subject vailable in the Library.

SHRI M. MALLIKARJUN KHARGE.—I am prepared to tell all the ts. I have got the material and I will explain.

MR. SPEAKER.—At the time of the discussion Shri Byregowda

ಶ್ರೀ ಸಿ. ಬೈರೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ಈ ಚರ್ಚೆಗೆ ಪ್ಯಾರಾಮಿಟರ್ಸ್ ಅನ್ನು ನಿಗದಿ ಪಡಿಸಬೇಕೆಂದು ಹೇಳಿದ್ದಾರೆ ಮತ್ತು ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನು ಸಹ ಹೇಳಿದ್ದಾರೆ. ಈ ಸದನಕ್ಕೆ ತನ್ನದೇ ಆದಂಥ ಸ್ಥಾನ ಇದೆ; ಪ್ರಿವಿಲೇಜಸ್ ಇದೆ. ನಾವು ಇಲ್ಲಿ ಏನು ಮಾತನಾಡುತ್ತೇವೊ ಅದನ್ನು ಹೊರಗೆ ಮಾತನಾಡುವ ಹಾಗೆ ಇಲ್ಲ. ಹಾಗೆ ಮಾತನಾಡಿದರೆ ಯಾರಾದರೂ ಕೋರ್ಟ್‌ಗೆ ಹೋಗಬಹುದು. ಆದರೆ ಇಲ್ಲಿ ಮಾತನಾಡಿದ ವಿಚಾರಗಳ ಬಗ್ಗೆ ಕೋರ್ಟ್ ಮುಂದೆ ಪ್ರಶ್ನೆ ಮಾಡುವಂತಿಲ್ಲ. ಅಂದರೆ ಈ ಸದನಕ್ಕೆ ಗೌರವ ತರುವಂಥ ಕೆಲವು ಹಕ್ಕುಬಾಧ್ಯತೆಗಳಿಂ ಮತ್ತು ಕೆಲವು ಪ್ರಿವಿಲೇಜಸ್ ಇವೆ. ನಾವೇ ಇಟ್ಟುಕೊಂಡಿರುವ ನಿಯಮಾವಳಿಗಳ ಪ್ರಕಾರ ಯಾವುದೇ ವಿಚಾರವು ಚರ್ಚೆಯಾಗಬೇಕಾದರೆ ಯಾವ ರೀತಿಯಲ್ಲಿ ಆಗಬೇಕೆಂದು ಅದರಲ್ಲಿ ಹೇಳಿದೆ. ಅದರ ಪ್ರಕಾರ ಚರ್ಚೆಯಾಗಬೇಕೇ ವಿನಹ ವಿರೋಧ ಪಕ್ಷದ ನಾಯಕರು ಹೇಳಿದ ರೂಪದಲ್ಲಿ ಅವರು ಹೇಳಿದ ಧಾಟಿಯಲ್ಲಿ ಚರ್ಚೆಯಾಗುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ನನ್ನ Freedom of expression is guaranteed here also.

MR. SPEAKER.—I will guarantee you that.

ಶ್ರೀ ಸಿ. ಬೈರೇಗೌಡ.—ಆದ್ದರಿಂದ ಅವರು ಹೇಳಿದಂತೆ ಆಗುವುದಿಲ್ಲ. ಇದು ಸದಸ್ಯರ ಹಕ್ಕಿನ ಪ್ರಶ್ನೆಯ ವಿಚಾರವಾಗಿದೆ. ಅವರು ಸ್ಪೆಸಿಫಿಕ್ ಇಷ್ಯು ಎಂದು ಹೇಳುತ್ತಿದ್ದಾರೆ. ನಾನು ಮತ್ತು ಮಾನ್ಯ ಖರ್ಗೆಯವರು ಈ ಬಗ್ಗೆ ಈಗಾಗಲೇ ಹೇಳಿದ್ದೆವೆ. ಏನೆಂದರೆ ಇಲ್ಲಿ ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕಿನ ಹರಣ ಆಗಿದೆ. ನಾನು ಯಾರ ಹತ್ತಿರಬೇಕಾದರೂ ಮಾತಾಡಬಹುದು. ಆ ಮೂಲಭೂತ ಹಕ್ಕಿನ ಹರಣವಾಗಿರುವುದು ಅತಿ ಮುಖ್ಯವಾದ ಪ್ರಶ್ನೆ. ಇದರ ವಿಚಾರ ಚರ್ಚೆ ಯಾಗಬೇಕಾಗಿದೆ. ತಾವು ಅದಕ್ಕೆ ಪರವಾನಿಗೆ ಕೂಡ ಕೊಟ್ಟಿದ್ದೀರಿ, ಅದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮೊನ್ನೆ ಮತ್ತೊಂದು ಮಾತನಾಡಿ ಹೇಳಿದೆನೆ. ಈ ಸಮಿತಿ ಅವರು ರಾಜ್ಯಪಾಲರಿಗೆ ಏನೂ ವರದಿ ಕೊಟ್ಟಿದ್ದಾರೆ, ಅದು ಇಲ್ಲಿ ಚರ್ಚೆಯಾಗತಕ್ಕಂಥದ್ದು ಅಲ್ಲ, ತಾವು ಅದನ್ನು ಎತ್ತಿಹಿಡಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದನ್ನು ಬಿಟ್ಟು ಉಳಿದ ಎಲ್ಲಾ ವಿಚಾರಗಳ ಬಗ್ಗೆ ಅಂದರೆ ಚೀಫ್ ಸೆಕ್ರೆಟರಿ ಇರಬಹುದು, ಹಿಂದಿನ ಮುಖ್ಯಮಂತ್ರಿಗಳು ಇರಬಹುದು, ಮತ್ತೊಬ್ಬ ಮುಖ್ಯಮಂತ್ರಿಗಳು ಇರಬಹುದು, ಅಧಿಕಾರಿಗಳು ಇರಬಹುದು, ಇವರೆಲ್ಲರ ವರ್ತನೆ ಬಗ್ಗೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಈ ಚರ್ಚೆಯ ಸಮಯದಲ್ಲಿ ತಾವು ಯಾವುದೇ ನಿರ್ಭಂದ ಹಾಕಬಾರದೆಂದು ಕೇಳಿಕೊಳ್ಳುತ್ತೇನೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ.—ಸಭಾಧ್ಯಕ್ಷರೇ, ಚರ್ಚೆಯ ಪ್ಯಾರಾಮಿಟರ್ ಬಗ್ಗೆ ಮಾತಾಡುತ್ತಿದ್ದೇವೆ. ಟೆಲಿಫೋನ್ ಕದ್ದಾಲಿಕೆ ಆಗಿರುವುದು ನಿಜ, ಅದು ಆಗಿದೆ. ಆದರೆಅದು ದೊಡ್ಡ ಅಪರಾಧವೆಂದು ಗೊತ್ತಿದ್ದರೂ ಇನ್ನೂ ಅಪರಾಧಿಗಳನ್ನು ತಾವು ಪತ್ತೆಹಚ್ಚಿಲ್ಲ. ಆಕಸ್ಮಾತ್ ರಾಜ್ಯಪಾಲರ ಸಭೆಯ ಸಮಿತಿಯ ವರದಿ ಪತ್ತೆಮಾಡಿದೆಯೋ ಏನೋ ಎನ್ನುವುದನ್ನು ತಿಳಿದುಕೊಳ್ಳಬೇಕಾದ ಹಕ್ಕು ನಮಗುಂಟು ಏಕೆಂದರೆ ಇದು ನಮ್ಮ ಮೂಲಭೂತ ಹಕ್ಕಿನ ಮೇಲೆ ಮಾಡಿದಂಥ ಅಪರಾಧ. Parameters should be to find out the persons, who are responsible for committing this heinous crime, besides what we should do about it.

SRI K. LAKKAPPA.—We are very happy that you have conceded our demand under rule 68 for a discussion. But unfortunately the opposition on the other side has sidetracked the issue and said, what are the issues involved in it if it is a public important issue. This involves more importance because it involves the privilege under rule 190. Sir, you have rightly said that if there is privilege involved, I can give notice. So, I have also submitted a notice under rule 190 for your consideration and action. I have also submitted a photostat copy of the report.

(Interruption)

Let him allow me to submit.

ಅಧ್ಯಕ್ಷರು.—ನಿಮ್ಮ ನೋಟೀಸ್ ಈಗ ತಾನೇ ನನಗೆ ಬಂದಿದೆ. ಅದನ್ನು ನೋಡಿ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

SRI K. LAKKAPPA.—Before that, I would like to submit what is public importance under rule 68. They have asked the names deleted and also added and all those things have been asked in the Rajya Sabha Committee. To that extent privilege of this House is involved ; because coercion, threat by the former Chief Minister to produce document as he liked. Because in 1977, what has happened to former Prime Minister. The same procedure has to be adopted. When Sri Kanwarlal Guptha raised.....

(interruptions)

MR. SPEAKER.—Mr. Lakkappa, is one of out senior-most Member of this House. Whenever he makes a submission, I will have to hear him.

(Interruption)

MR. SPEAKER.—I request you to kindly put up with me.

SRI D. B. CHANDRE GOWDA.—He is going into the merits of the case.

SRI K. LAKKAPPA.—I am not going into the merits of the case Because you have asked me.....

ಅಧ್ಯಕ್ಷರು.— ಆಗಬಹುದು ಲಕ್ಕಪ್ಪನವರೇ, ನೋಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ನನ್ನ ಹೆಸರನ್ನು ತೆಗೆದರು ಎಂದು ಹೇಳುತ್ತಾರೆ. ಅದಕ್ಕೆ ವಿವರಣೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ನಾನು ನಿಮ್ಮನ್ನು ಕರೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ನಾಲ್ಕೈದು ದಿವಸಗಳಿಂದ ಈ ಕದ್ದಾಲಿಕೆ ವಿಚಾರದಲ್ಲಿ ಪ್ರಸ್ತಾಪ ನಡೆಯುತ್ತಿದೆ, ನಾವು ಕೇಳುತ್ತಿದ್ದೇವೆ. ಇದು ಕೊನೆಯಾಗಿ ಹಿಂದೆ ಬಹಳಷ್ಟು ಈ ವಿಷಯ ಚರ್ಚೆಯಾಗಿ ಇದಕ್ಕೆ ಸಂಬಂಧಪಟ ಮಾನ್ಯ ಮುಖ್ಯಮಂತ್ರಿಗಳು ಅಂದರೆ ಅಂದಿನ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಸಹ ಕೊಟ್ಟಿದ್ದಾರೆ. ಪುನ: ಈಗ ಈ ವಿಚಾರ ಬಂದಿದೆ. ಈಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ಸದನದ ಸದಸ್ಯರು. ಇದು ಚರ್ಚೆಯಾಗುವಾಗ ಸದನಕ್ಕೆ ಅವರು ಬರಲೇಬೇಕು. ತಾವು ಆದೇಶ ಕೊಡಬೇಕು. ಏಕೆಂದರೆ ಅವರು ಇಲ್ಲದೇ, ಅವರನ್ನು ಹೊರಗಿಟ್ಟು ನಾವು ಚರ್ಚೆ ಮಾಡುವುದು ಸರಿಯಲ್ಲ. ಅವರು ಕೂಡಾ ಸದನದ ಸದಸ್ಯರಾದ್ದರಿಂದ ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಅವರೂ ಈ ಸದನಕ್ಕೆ ಈ ಚರ್ಚೆಯಾಗುವಾಗ ಬರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ(ಕಾನೂನು ಮತ್ತು ಸಂಸದೀಯ ಸಚಿವರು) —ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸಚಿವರು ಒಂದು ಸೂಚನೆಯನ್ನು ಏನು ಕೊಟ್ಟಿದ್ದಾರೆ, ಅದಕ್ಕೆ ಪೂರಕವಾಗಿ ಹೇಳುತ್ತೇನೆ. ಏಕೆಂದರೆ ಈ ಸದನದ ಸತ್‌ಪರಂಪರೆಯನ್ನು ನಾವು ಕಾಯ್ದುಕೊಳ್ಳಬೇಕಾಗುತ್ತದೆ. ಏಕೆಂದು ಹೇಳಿದರೆ ಚರ್ಚೆಗೆ ಯಾವ ದಿವಸವನ್ನು ತಾವು ನಿಗದಿ ಮಾಡುತ್ತೀರೋ ಅದು ನಿಮಗೆ ಬಿಟ್ಟದ್ದು. ಅವರನ್ನು ಕರೆಯಿಸಬೇಕು ಎಂದು ಹೇಳತಕ್ಕಂಥದ್ದು ಕೂಡ ತಪ್ಪಾಗೇ ಬಿಟ್ಟದ್ದು. ಆದರೆ ನಮ್ಮ ವಿರೋಧ ಪಕ್ಷದ ನಾಯಕರು ಬೇಕಾದರೆ ಅವರನ್ನು ವಿನಂತಿ ಮಾಡಿಕೊಳ್ಳಬಹುದು. ಅವರ ಸಮಕ್ಷಮದಲ್ಲಿ ಚರ್ಚೆಯಾದರೆ ಅವರಿಗೂ ನ್ಯಾಯ ಸಿಗುತ್ತದೆ. ಆದುದರಿಂದ ಈ ಕೆಲವು ಪರಂಪರೆಯನ್ನು ನಾವು ಉಪಯೋಗ ಮಾಡಿಕೊಂಡು ನಾವು ಚರ್ಚೆ ಮಾಡುವುದು ಒಳ್ಳೆಯದು ಎಂದು ನನ್ನ ಸೂಚನೆ. ಎರಡನೆಯದಾಗಿ ಪತ್ರಿಕೆಯಲ್ಲಿ ಕೆಲವು ವಿಚಾರಗಳು ಬಂದಿವೆ. ಸಬಾರ್ಡಿನೇಟ್ ಲೆಜಿಸ್ಲೇಷನ್ ಬಗ್ಗೆ ನಮ್ಮ ಸದನದ ಸನ್ಮಾನ್ಯ ಸದಸ್ಯರಾದ ರಾಮಕೃಷ್ಣಹೆಗಡೆ ಅವರೇ ಒಂದು ಆಪಾದನೆಯನ್ನು ಮಾಡಿದ್ದಾರೆ ಅದೇನೆಂದು ಹೇಳಿದರೆ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿ ಏನು ಇದೆ, ಅವರಿಗೆ ಯಾವುದೇ ಒಂದು

'they have actually violated the principles of natural justice' ಅವರು ನನ್ನ ಹತ್ತಿರ ಕೇಳಲೇ ಇಲ್ಲ ಎನ್ನುವ ಅವರ ಒಂದು ಮಾತೂಕೂಡಾ ಪತ್ರಿಕೆಯಲ್ಲಿ ಬಂದಿರುವುದರಿಂದ ನಾವು ಏನು ಈ ಸದನದ ಪಾವಿತ್ರತೆಯನ್ನು ಕಾಪಾಡಿಕೊಳ್ಳತಕ್ಕಂಥ ದೃಷ್ಟಿಯಲ್ಲಿ, ನಾಳೆ ಯಾವುದೇ ಒಂದು ಅಪಸ್ವರ ನಮ್ಮ ಸದನದ ಕಾರ್ಯಕಲಾಪಗಳಲ್ಲಿ ಬಾರದಹಾಗೆ ಕಾಪಾಡಿಕೊಳ್ಳುವುದು ಕೂಡಾ ತಮ್ಮ ಕರ್ತವ್ಯ ಮತ್ತು ನಮ್ಮ ಕರ್ತವ್ಯ ಕೂಡಾ ಇದೆ. ಈ ಎಲ್ಲಾ ದೃಷ್ಟಿಕೋನದಿಂದ ಸನ್ಮಾನ್ಯ ಸದಸ್ಯರು ಹಾಜರಿದ್ದರೆ ಅದು ನಮ್ಮ ಪರಂಪರೆಗೆ ಅನುಗುಣವಾಗುತ್ತದೆ ಎಂದು ಹೇಳಿ ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸಭೆಗೆ ಬರುವುದು ಬಿಡುವುದು ಅದು ಸದಸ್ಯರಿಗೆ ಬಿಟ್ಟಿದ್ದು. ಸಭೆಗೆ ಅವರನ್ನು ಕರೆಯಿಸಲೇಬೇಕು ಎಂದು ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ.....

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನನ್ನು ಕರೆದಿದ್ದಾರೆ, ನಾನು ಮಾತನಾಡಲೋ ನೀವು ಮಾತ ನಾಡುತ್ತೀರೋ ?

ಅಧ್ಯಕ್ಷರು.—ತಾವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಬೈರೇಗೌಡರು ಏನು ಹೇಳಿದರು ಎಂದರೆ, ನಮ್ಮ ಶಾಸನಸಭೆಯ ನಡವಳಿಕೆಯಲ್ಲಿ ನೀತಿನಿಯಮಗಳನ್ನು ಹಾಗೂ ಕಟ್ಟುಪಾಡುಗಳನ್ನು ನಾವು ಹಾಕಿಕೊಂಡಿದ್ದೇವೆ ; ಆದರೆ ವ್ಯಾಪ್ತಿಯಲ್ಲಿ ಚರ್ಚೆ ಮಾಡದೇ ನೀವು ಕಟ್ಟುಪಾಡು ಹಾಕುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರೆ. ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ನನ್ನ ಚರ್ಚೆ ಮಾನ್ಯ ಬೈರೇಗೌಡರಿಗೆ ತಿಳಿಯಿತು ಎಂದು ನಾನು ತಿಳಿದಿದ್ದೆ. ಆದರೆ ಅವರಿಗೆ ತಿಳಿಯಲಿಲ್ಲ ಎಂದು ಅಂದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ.—ತಿಳಿದಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ತಿಳಿದಿದ್ದರೆ ಹೇಳುತ್ತಿರಲಿಲ್ಲ. ನಾನು ಹೇಳಿದ್ದನ್ನು ಪುನ: ಹೇಳುತ್ತೇನೆ. ಸಂಸತ್ತಿನ ನಡವಳಿಕೆ ಮತ್ತು ಶಾಸನ ಸಭೆಯ ನಡವಳಿಕೆಗಳು ತನ್ನದೇ ಆದ ಇತಿ ಮಿತಿಗಳನ್ನು ಒಳಗೊಂಡು ನಡೆಯುತ್ತದೆ ಎನ್ನುವುದು ನನಗೂ ಗೊತ್ತಿದೆ. ನಾನು ಎರಡೂ ಕಡೆಯಲ್ಲಿ ಕೆಲಸ ಮಾಡಿದ್ದೇನೆ. ಆದರೆ ನಮ್ಮ ಇತಿಮಿತಿಗಳು ಏನು ಇದೆ...

ಅಧ್ಯಕ್ಷರು.— ನೀವು ಮೂರು ಕಡೆ ಕೆಲಸ ಮಾಡಿದ್ದೀರಿ. ಅಲ್ಲಿ ಮಾಡಿದ್ದೀರಿ, ಇಲ್ಲಿ ಮಾಡಿದ್ದೀರಿ ಮತ್ತು ಪಾರ್ಲಿಮೆಂಟ್‌ನಲ್ಲಿಯೂ ಮಾಡಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಆದಂದರಿಂದ ನನ್ನ ಮನಸ್ಸಿನಲ್ಲಿರತಕ್ಕಂಥ ದ್ವಂದ್ವ...

ಶ್ರೀ ಕೆ. ಹೆಚ್. ರಂಗನಾಥ್.— ಒಂದು ತರಹ ಸರ್ವಾಂತರ್ಯಾಮಿ ಇದ್ದ ಹಾಗೆ ಇದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಅಂದರೆ ನೀವು ನನ್ನನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಡಿ. ನಾನು ಪ್ರಶ್ನೆ ಕೇಳಿದ್ದುದು ಏನೆಂದರೆ, ಸಂಸತ್ತು ಮತ್ತು ಶಾಸನ ಸಭೆಯ ಸಮರ ಪ್ರಾರಂಭವಾಗುವುದು ಬೇಡ. ಅಷ್ಟಕ್ಕೆ ಇತಿ ಮಿತಿ ಮಾಡಿ ಎಂದು ಹೇಳಿದೆ.

ಅಧ್ಯಕ್ಷರು.— ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ಇಷ್ಟು ಸೀಮಿತವಾಗಿ ಹೇಳಿದೆ. ಸಂಸತ್ತು, ಶಾಸನ ಸಭೆಯ ಸಮರವನ್ನು ನಾವು ಪ್ರಾರಂಭಿಸುವುದೇ ಬೇಡ. ಆ ಇತಿ ಮಿತಿಯನ್ನು ಹಾಕಿ ಎಂದು ಹೇಳಿದೆ. ಮತ್ತೊಂದು, ಶ್ರೀಮಾನ್ ಲಕ್ಕಪ್ಪನವರು ವಿರೋಧ ಪಕ್ಷದವರು ಈ ವಿಚಾರವನ್ನು side-track ಮಾಡುತ್ತಿದ್ದಾರೆ, ಹಾದಿ ತಪ್ಪಿಸುತ್ತಿದ್ದಾರೆ ಎಂದು ಹೇಳಿದರು. ಎಲ್ಲಿ ಹಾದಿ ತಪ್ಪಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡಿದೆವು, ನನಗೆ ತಿಳಿಯುಲಿಲ್ಲ. ಇಷ್ಯೂವನ್ನು ಶಾಸನ ಸಭೆಯೊಳಗೆ ಏನು ಚರ್ಚೆ ಮಾಡಬೇಕು ಎನ್ನುವುದನ್ನು ನಮಗೆ ನಾವು ನಿರ್ಧಾರ ಮಾಡಿಕೊಳ್ಳದೇ ಮನಸ್ಸಿಗೆ ಬಂದ ಹಾಗೆ ಲಕ್ಕಪ್ಪನವರು ತಿಳಿದ ಹಾಗೆ ಮಾಡುವುದು ಎಂದು ಹೇಳಿದರೆ ಅದಕ್ಕೆ ಇತಿಮಿತಿಗಳು ಇಲ್ಲ.

SRI K. LAKKAPPA.— He has to come before this House.

ಶ್ರೀ ವಾಟಾಳ್ ನಾಗರಾಜ್.— ಯಾವ ರೀತಿ ಚರ್ಚೆ ನಡೆಯಬೇಕು ಎನ್ನುವುದನ್ನು ಅಧ್ಯಕ್ಷರು ನಿರ್ಧಾರ ಮಾಡುತ್ತಾರೆ. ಚರ್ಚೆ ದಾರಿ ತಪ್ಪಿ ಹಾಗೆ ತಾವು ಹೇಳುತ್ತೀರಿ. ಅದು ಪ್ರಶ್ನೆ ಇಲ್ಲ...

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಹಿರಿಯ ಸಚಿವರೂ ಹಾಗೂ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು.

ಶ್ರೀ ಕೆ. ಲಕ್ಕಪ್ಪ.— ಮಾನ್ಯ ಚಂದ್ರೇಗೌಡರೇ, ತಾವು ದಯ ಮಾಡಿ ತಿಳಿಯಿರಿ. ಇದಕ್ಕಿಂತ ಸೀರಿಯಸ್ ಇಶ್ಯೂ ಆದರೆ ನಿಮ್ಮ ಲೀಡರ್ ಇಲ್ಲಿಗೆ ಬರಬೇಕಾಗುತ್ತದೆ. ಅವರು ಈ ಸದನದ ಸದಸ್ಯರೂ ಆಗಿದ್ದಾರೆ. ನಾಳೆ ದಿವಸ ಪ್ರಿವಿಲೇಜ್ ಮೋಷನ್ ಬಂದರೆ ತಾವು ಅಡ್ಮಿಟ್ ಮಾಡಿದರೆ ಇವರು ಇಲ್ಲಿ ಇರಬೇಕಾಗುತ್ತದೆ.

ಶ್ರೀ ಡಿ. ಬಿ ಚಂದ್ರೇಗೌಡ.— ನನಗೆ ಗೊತ್ತಿಲ್ಲ...

ಶ್ರೀ ಕೆ. ಲಕ್ಕಪ್ಪ.— ಗೊತ್ತಿಲ್ಲ ಎನ್ನುವ ವಿಚಾರ ಹೇಳಬೇಡಿ, ನಾವು ಹೇಳಿದ್ದನ್ನು ಫಿಕ್ಸ್ ಮಾಡಿ ಹೇಳಿದರು ಎಂದು ಹೇಳಬೇಡಿ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಮಾತನಾಡುವಾಗ ನೀವು ಮಾತನಾಡುವುದು ಕ್ರಮವಾ? ಅಧ್ಯಕ್ಷರು ನನಗೆ ಕುಳಿತುಕೊಳ್ಳಲು ಹೇಳಿದರೆ ಕುಳಿತುಕೊಳ್ಳುತ್ತೇನೆ. ನಾನು ಮಾತನಾಡುವಾಗ ನೀವು ಎದ್ದು ಮಾತನಾಡುವುದು ಕ್ರಮವಾ? ಇದು ಕ್ರಮ ಎಂದಾದರೆ ನೀವು ಮಾಡಿದ್ದೆಲ್ಲಾ ಕ್ರಮ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಸದಸ್ಯರು ಇಲ್ಲಿ ಬರಲೇಬೇಕು ಎಂದು ಹೇಳತಕ್ಕ ಒತ್ತಡ ಏನೂ ಇಲ್ಲ. ಒತ್ತಾಯ ಮಾಡುವುದಕ್ಕೆ ಅವರಿಗೆ ಅಧಿಕಾರವೂ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ಈ ಶಾಸನ ಸಭೆಯಲ್ಲಿ ನಮ್ಮ ಪಕ್ಷದವರು ನನ್ನನ್ನು ನಾಯಕರನ್ನಾಗಿ ಆರಿಸಿದ್ದಾರೆ. ಅದನ್ನು ತಾವು ಗುರುತಿಸಿದ್ದೀರಿ. ಆ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಶ್ರೀ ಲಕ್ಕಪ್ಪನವರ ಆಶೀರ್ವಾದದಿಂದ ಇಲ್ಲಿ ನಾನು ಕೆಲಸ ಮಾಡುತ್ತಿಲ್ಲ. ಇದನ್ನು ಅವರು ತಿಳಿದುಕೊಳ್ಳಬೇಕು. ಇಲ್ಲ ಸದನದ ಒಬ್ಬ ಸದಸ್ಯರು ಅದಕ್ಕೆ ನಾನು ಹೇಳಿದೆ. if you are discussing the conduct of a Member, is presence his very much necessary. Otherwise it is his option.

(ಗೊಂದಲ)

ಅಧ್ಯಕ್ಷರು.— ಈ ವಿಚಾರದಲ್ಲಿ...

(ಗೊಂದಲ)

ಶ್ರೀ ಸಿ. ಬೈರೇಗೌಡ.— ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ನನ್ನನ್ನು ಕುರಿತು ಹೇಳಿದರು. ಏನೆಂದರೆ ಅವರು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡಿಲ್ಲ ಎಂದು ಅವರು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ ನಾನು ಹೇಳಿದ್ದು ಏನೆಂದರೆ. ರಾಜ್ಯ ಸಭೆಯಲ್ಲಿ ಕೊಟ್ಟ ರೆತಕ್ಕ ವರದಿಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕದ್ದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ಈ ವಿಚಾರದಲ್ಲಿ ಏನು ಹೇಳುತ್ತಾರೆಂದರೆ ಈ ಸದನ, ಮತ್ತು ಪಾರ್ಲಿಮೆಂಟ್ ನಡುವೆ ಸಮರ ಆಗುವುದು ಬೇಡ ಎಂದು, ಅವನ್ನು ನಾನೂ ಅಕ್ಷರಶಃ ಒಪ್ಪುತ್ತೇನೆ.

ಅಧ್ಯಕ್ಷರು.— ಇಬ್ಬರೂ ಒಪ್ಪಿದ್ದೀರಾ?

ಶ್ರೀ ಸಿ. ಬೈರೇಗೌಡ — ಉಳಿದ ವಿಚಾರ ಏನು ಹೇಳಿದ್ದಾರೆಂದರೆ ಪ್ಯಾರಾಮೀಟರ್ಸ್ ಎಂದ? ಹೇಳಿದ್ದಾರೆ. ಆ ಪ್ಯಾರಾಮೀಟರ್ಸ್ ಎಂದರೆ ಏನು? ನಮಗೆ ರೂಲ್ಸ್ ಆಫ್ ಪ್ರೊಸೀಜರ್ ಇಲ್ಲವೇ? ತಾವು ನಮಗೆ ಅಧ್ಯಕ್ಷರಾಗಿ ಇದ್ದೀರೋ ಇಲ್ಲವೋ? ಆದ್ದರಿಂದ ನಮ್ಮ ನಿಯಮಗಳಿಗೆ ಒಳಪಟ್ಟಂತೆ ಚರ್ಚೆ ಆಗಬೇಕು ಎಂದು ನಾನು ಹೇಳಿದ್ದು. ಅದಕ್ಕಿಂತ ಅವರದ್ದೇ ಆದ ಪ್ಯಾರಾಮೀಟರ್ಸ್ ಬಗ್ಗೆ ಹೇಳಿದ್ದರಲ್ಲ. ಆ ಪ್ಯಾರಾಮೀಟರ್ಸ್ ಆಗುವುದಿಲ್ಲವೆಂದು ನಾನು ಹೇಳತಕ್ಕದ್ದು ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸಬೇಕು ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ನಾವು ಪ್ಯಾರಾಮೀಟರ್ಸ್ ಫಿಕ್ಸ್ ಮಾಡಬೇಕು ಎಂದು ಹೇಳುವುದಕ್ಕೆ ನಮಗೆ ಹಕ್ಕಿಲ್ಲ. ನಾವು ಅದನ್ನು ಕೇಳಲೂ ಇಲ್ಲ. ತಾವು ಅಧ್ಯಕ್ಷರು ಇದ್ದೀರಿ, ತಾವು ಕೊಟ್ಟ ತೀರ್ಮಾನವನ್ನು ನಾವು ಒಪ್ಪಿಕೊಂಡಿದ್ದೇವೆ, ನಾನು ಪದೇ ಪದೇ ಹೇಳಿದ್ದೇನೆ. We are not afraid of the discussion about anything as far as this matter is concerned. ಆದರೆ ಪ್ರಶ್ನೆ ಏನು ಇದೆ ಅಂದರೆ, ನಾವು ಕಾಂಡಕ್ಟ್ ಆಫ್ ಮೆಂಬರ್

ಬಗ್ಗೆ ಡಿಸ್ಕಸ್ ಮಾಡಬೇಕು ಎನ್ನುವುದಾಗಲೀ, ಅವರಿಗೆ ನೋಟೀಸ್ ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ಈ ಟೆಲಿಫೋನ್ ಟ್ಯಾಪಿಂಗ್‌ನ ಪದ್ಧತಿ ಬಗ್ಗೆ ಮಾಡುತ್ತಿದ್ದೇವೆಯೇ ಅಥವಾ ಇದುವರೆಗೆ ಈ ಸರ್ಕಾರದಲ್ಲಿ ರ್ಇಂಟೆಲಿಜೆನ್ಸ್ ಇಸವಿಯಿಂದ ಆಗಿರತಕ್ಕ ಮುಖ್ಯಮಂತ್ರಿಗಳು ಯಾರ್ಯಾರು ಇದ್ದಾರೆ, ಅವರವರ ಕಾಲದಲ್ಲಿ ಎಂತೆಂತಹ ಟೆಲಿಫೋನ್ ಪ್ರಕರಣಗಳು ನಡೆದಿವೆ ಅದು ಏನೇನಾಗಿದೆ ಎನ್ನುವುದರ ಬಗ್ಗೆ ಸಹ ನಾವು ಚರ್ಚೆ ಮಾಡಬೇಕಾ, ಇವೆರಡನ್ನೂ ತಾವು ಗಮನದಲ್ಲಿಟ್ಟುಕೊಂಡು ಈ ಚರ್ಚೆಗೆ ತಾವು ಟೈಮ್ ನಿಗದಿ ಮಾಡಬೇಕೆಂದು ನಾವು ಕೇಳಿಕೊಳ್ಳುವುದು.

ಅಧ್ಯಕ್ಷರು.— ಆಗಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಏಕೆಂದರೆ, ರಾಜ್ಯ ಸಭೆ ಕಮಿಟಿ ಅವರು ಕೊಟ್ಟಿರುವ ರಿಪೋರ್ಟ್ ಅನ್ನು ನೋಡಿದಾಗ ನಾನು ಅದನ್ನು ಸಂಪೂರ್ಣವಾಗಿ ಓದಲಿಕ್ಕೆ ಆಗಲಿಲ್ಲ, ಆದರೂ ತಮಗೆ ಸಹಾಯ ಮಾಡಲಿಕ್ಕೆ ನನ್ನ ಅಭಿಪ್ರಾಯಂ ಹೇಳುತ್ತಿದ್ದೇನೆ. ಅದು ಏನೆಂದರೆ ಈ ಸಿಸ್ಟಂ ಏನು ಇದೆ, ಈ ಸಿಸ್ಟಂ ಬಗ್ಗೆ ಚೀಫ್ ಸೆಕ್ರೆಟರಿಯವರು ಹೇಳಿದ್ದಾರೆ. ಹಾಗಾದರೆ ಈ ಸಿಸ್ಟಂ ಬಗ್ಗೆ ಸ್ಪೆಸಿಫಿಕ್ ಇನ್ಸಿಡೆನ್ಸ್ ತೆಗೆದುಕೊಳ್ಳೋಣವೇ ಅಥವಾ ಕಳೆದ ೧೦ ವರ್ಷಗಳಿಂದ ನಡೆದಿರುವ ಘಟನೆಗಳನ್ನು ತಗೆದುಕೊಳ್ಳೋಣವೋ ಎಂಬುದನ್ನು ನಾವು ಕೇಳುತ್ತಿದ್ದೇವೆ. ಇದನ್ನೂ ಸಹ ತಾವು ಗಮನದಲ್ಲಿ ಇಟ್ಟುಕೊಳ್ಳಬೇಕಂ. ಈ ಸಿಸ್ಟಂ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ಹೇಳುತ್ತೇವೆ.

ಅಧ್ಯಕ್ಷರು.— ಈ ಎಲ್ಲಾ ಪ್ರಶ್ನೆಗಳೂ ಶ್ರೀಮಾನ್ ಖಿರ್ಗೆಯವರು ಚರ್ಚೆಯನ್ನು ಪ್ರಾರಂಭ ಮಾಡುವಾಗ ಬರುತ್ತದೆ...

ಶ್ರೀ ವಾಟಾಳ್ ನಾಗರಾಜ್.— ಬೆಳಗಾಂನ ನಗರ ಸಭೆಯಲ್ಲಿ ಮಂರಾಠಿ ಧ್ವಜವನ್ನು ಹಾಕಿದ್ದಾರೆ, ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ನಿರ್ಣಯವನ್ನು ಮಾಡಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇದ್ದಾರೆ.ಬೆಳಗಾಂ ನಗರ ಸಭೆಯನ್ನು ಕೂಡಲೇ ರದ್ದು ಮಾಡಬೇಕೆಂದು ಹೇಳುತ್ತೇನೆ. ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು...

ಶ್ರೀ ಡಿ. ಬಿ. ಚಂದ್ರೇಗೌಡ.— ಬೆಳಗಾಂ ವಿಷಯದ ಬಗ್ಗೆ ನಾನು ಸಹ ನೋಟೀಸ್ ಕೊಟ್ಟಿದ್ದೇನೆ. ಇದು ಇಡೀ ಕರ್ನಾಟಕದ ಪ್ರಶ್ನೆ...

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.— ನಾನು ಕೊಟ್ಟಿರುವ ನೋಟೀಸ್ ಬಗ್ಗೆ ಚರ್ಚೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ.

ಅಧ್ಯಕ್ಷರು.— ನಾನು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದು ಅವರ ಗೈಡೆನ್ಸ್ ತೆಗೆದುಕೊಂಡು ಆ ಮೇಲೆ ಟೈಮ್ ಅನ್ನು ನಿಗದಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ. — ಸ್ವಲ್ಪ ಬೇಗನೇ ತೀರ್ಮಾನ ತೆಗೆದುಕೊಂಡರೆ ಒಳ್ಳೆಯದು. ನಾಳೆ ಅಥವಾ ನಾಡಿದ್ದು ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು.— ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಅನ್ನು ನಾನು ಮಧ್ಯಾಹ್ನ ಕರೆಯುತ್ತೇನೆ ಅನಂತರ ಇದನ್ನು ತೀರ್ಮಾನ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.— ಈಗ ಮಾನ್ಯ ಚಂದ್ರೇಗೌಡರು ಏನು ಪಾಯಿಂಟ್ಸ್ ರೈಸ್ ಮಾಡಿದರಲ್ಲ, ಅದೇ ಸಿಮಿಲರ್ ಪಾಯಿಂಟ್ಸನ್ನು ಮಾನ್ಯ ವೀರಪ್ಪ ಮೊಯ್ಲಿಯವರು ೧೫ ಆಕ್ಟೋಬರ್ ೧೯೮೫ ರಲ್ಲಿ ರೈಸ್ ಮಾಡಿದ್ದರು. ಬ್ರೀಚ್ ಆಫ್ ಪ್ರಿವಿಲೇಜ್‌ಗೆ ನೋಟೀಸ್ ಕೊಡಬೇಕು ಎಂದು ಇತ್ತು. ಅದಕ್ಕೆ ಪುನಃ ನೋಟೀಸ್ ಕೊಡತಕ್ಕಂಥದ್ದು ಚರ್ಚೆ ಬೇಡ, ತಾವು ಟೈಮ್ ಫಿಕ್ಸ್ ಮಾಡಿದರೆ ನಾಳೆ, ನಾಡಿದ್ದು ನಾವು ಚರ್ಚೆಗೆ ತೆಗೆದುಕೊಳ್ಳಬಹುದು.

(ಗೊಂದಲ)

† ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಆಕಾಶವಾಣಿಯಲ್ಲಿ ಒಂದು ಸುದ್ದಿ ಬಂತು. ಬಹುಶಃ ಎಲ್ಲರೂ ಕೇಳಿರಬಹುದು; ಆ ಸುದ್ದಿಯನ್ನು ನಾನು ಬರೆದುಕೊಂಡಿದ್ದೇನೆ ಇದು ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ದಯಮಾಡಿ ಕ್ಷಮಿಸಬೇಕು. ''ಬೆಳಗಾವಿ ಮಹಾನಗರ ಪಾಲಿಕೆಯ ಮಹಾಪೌರರು ಮೇಯರ್ ಭಗವಧ್ವಜವನ್ನು ಏರಿಸಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು'' ಎಂಬ ತರಾವನ್ನು ಮಾಡಿಕೊಂಡಿರುವುದು ಸುದ್ದಿಯಾಗಿ ಆಕಾಶವಾಣಿಯಲ್ಲಿ ಪ್ರಸಾರವಾಯಿತು

ಇದು ಒಂದು ಸುದ್ದಿ ಅಂದರೆ ಈ ಸುದ್ದಿ ಕರ್ನಾಟಕ ರಾಜ್ಯದ ಜನಕ್ಕೆ ಒಂದು ರೀತಿಯ ಕ್ಷೋಭೆಯನ್ನು ತರತಕ್ಕಂಥ ಸುದ್ದಿ. ಬೆಳಗಾವಿ ಕರ್ನಾಟಕದ ಒಂದು ಭಾಗ ಹಾಗೂ ಅವಿಭಾಜ್ಯ ಅಂಗ ಎನ್ನತಕ್ಕಂಥಾದ್ದು ಸಿದ್ಧ ವಾಗಿರತಕ್ಕಂಥಾದ್ದು. ಮತ್ತೆ ಅದರ ಪ್ರಸ್ತಾಪಕ್ಕೆ ಹೋಗುವುದಿಲ್ಲ ಎಂದು ಶಾಸನಸಭೆಯ ನಿರ್ಣಯ ವಾಗಿದೆ ಮುಖ್ಯ ಇದನ್ನು ಪದೇ ಪದೇ ಪ್ರಸ್ತಾಪ ಮಾಡುವುದು ಬೇಡ, ಇದು ಅಂತಿಮ ಎನ್ನತಕ್ಕಂಥ ಮಾತನ್ನು ಸಭಾ ನಾಯಕರಾದ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಅದಮೇಲೂ ಕೂಡ ರಾಜ್ಯದ ಮುಖ್ಯ ಮಂತ್ರಿಗಳ ಮಾತಿನ ವಿರುದ್ಧ, ಕೇಂದ್ರ ಸರ್ಕಾರ ಮಾಡಿದಂಥ ತೀರ್ಪಿನ ವಿರುದ್ಧ ಸಣ್ಣ ಒಂದು ಸಭೆ ತೀರ್ಮಾನ ಮಾಡುವುದು ಅಂದರೆ ನಮ್ಮ ರಾಜ್ಯದಲ್ಲಿ ಅಂತಹ ಒಂದು ಕಾರ್ಪೊರೇಷನ್ ಅಸ್ತಿತ್ವದಲ್ಲಿ ಇರಬೇಕೇ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಕ್ಷಣ ಇಂತಹ ರಾಜ್ಯ ವಿರೋಧಿ, ಜನ ವಿರೋಧಿ, ಕನ್ನಡ ವಿರೋಧಿ ಮತ್ತು ಶಾಸನಸಭೆಯ ಎಲ್ಲ ಅಭಿಪ್ರಾಯಗಳ ವಿರೋಧಿಯಾಗಿ ವಿರುದ್ಧವಾಗಿ ನಿರ್ಣಯ ಮಾಡಿರತಕ್ಕಂಥ ಈ ಒಂದು ಬೆಳಗಾವಿ ಪುರಸಭೆಯನ್ನು ಅಥವಾ ಕಾರ್ಪೊರೇಷನ್‌ನ್ನು ರದ್ದು ಮಾಡ ತಕ್ಕಂಥ ನಿರ್ಣಯವನ್ನು ಈ ಶಾಸನ ಸಭೆಯ ಮೂಲಕ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇಂತಹ ಒಂದು ರದ್ದು ಮಾಡತಕ್ಕಂಥ ನಿರ್ಣಯವನ್ನು ಅವರೇ ಮಂಡಿಸಬೇಕು ಅದಕ್ಕೆ ನಮ್ಮೆಲ್ಲರ ಸಂಪೂರ್ಣ ಸಹಕಾರ ಇದೆ ಎಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಬೆಳಗಾಂ ನಗರಪಾಲಿಕೆಯವರು, ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಾಡಿದ ನಿರ್ಣಯದ ಪ್ರಸ್ತಾವನೆ.

† ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ. ಇತ್ತೀಚೆಗೆ ಚುನಾವಣೆ ನಡೆದು ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಧಿಕಾರಕ್ಕೆ ಬಂದಿದ್ದಾರೆ. ಆದರೂ ಬೆಳಗಾವಿ ನೂರಕ್ಕೆ ನೂರು ಅಚ್ಚ ಕನ್ನಡದ ಪ್ರದೇಶ ಎಂದು ನಿರ್ಧಾರವಾಗಿದೆ. ಆ ಪ್ರಶ್ನೆಯನ್ನು ಮತ್ತೆ ಮತ್ತೆ ಕೆದಕತಕ್ಕಂಥಾದ್ದು ಯಾವುದೇ ಒಂದು ದೃಷ್ಟಿಯಿಂದ ಒಳ್ಳೆಯದಲ್ಲ, ಬಹಳ ದಿವಸ ದಿಂದ ಅಂದರೆ ನಾನು ಈ ಸಭೆಗೆ ಬಂದಾಗಿನಿಂದಲೂ ಹೇಳುತ್ತಾ ಇದ್ದೇನೆ. ಬೆಳಗಾವಿ ಮಹಾನಗರ ಪಾಲಿಕೆ ಮೇಲೆ ಮರಾಠಿ ಧ್ವಜವನ್ನು ಏನಂ ಹಾಕಿದ್ದಾರೆ, ಆ ಧ್ವಜವನ್ನು ತೆಗೆಯಬೇಕು ಎನ್ನತಕ್ಕಂಥ ಒತ್ತಡವನ್ನು ನಾನು ಅನೇಕಸಾರಿ ತಂದೆ. ಆಗ ರಾಜಮಹಾರಾಜರ ಧ್ವಜಗಳೆಲ್ಲಾ ಹೋಗಿವೆ, ಈ ಧ್ವಜ ಬೇಡ ಎನ್ನತಕ್ಕಂಥ ತಮ್ಮ ಅಭಿಪ್ರಾಯವನ್ನು ತಾವು ಹೇಳಿದಿರಿ. ಈ ಬಗ್ಗೆ ಸರ್ಕಾರ ಈ ಕೂಡಲೇ ನಿರ್ಧಾರ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಒಂದು ಕಾನೂನು ಮಾಡುತ್ತೇವೆ, ಈ ಪುರಸಭೆಗಳ ಮೇಲೆ ಯಾವ ಬಾವುಟಗಳನ್ನು ಹಾಕಬೇಕು ಎನ್ನತಕ್ಕಂಥ ನಿರ್ಧಾರಕ್ಕೆ ಬರುತ್ತೇವೆ ಎಂದು ಹೇಳಿದ ಮೇಲೂ ಸಹ ಈ ಸರ್ಕಾರ ಯಾವ ನಿರ್ಧಾರಕ್ಕೂ ಬರಲಿಲ್ಲ. ಇವತ್ತು ನಿಜವಾಗಲೂ ಬೆಳಗಾವಿಗೆ ಬೆಂಕಿ ಬಿದ್ದಿದೆ. ಅಲ್ಲಿ ಧಾರಾಳವಾಗಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ನಿರ್ಣಯಮಾಡಿ ಅಲ್ಲಿ ಮರಾಠಿ ಧ್ವಜವನ್ನು ಹಾಕಿ, ಅಲ್ಲಿ ದೊಡ್ಡ ಪ್ರಚೋದನೆಮಾಡಿ, ಕರ್ನಾಟಕದ ಹಿತಕ್ಕೆ ಕನ್ನಡ ನಾಡಿನ ಹಿತಕ್ಕೆ ಅಪಾರವಾದಂಥ ಧಕ್ಕೆ ಇವತ್ತು ಸಂಭವಿಸಿದೆ. ಇವತ್ತು ಸರ್ಕಾರದ ಏಕಮೇವ ನಿರ್ಧಾರ ಆಗಬೇಕಾಗಿರತಕ್ಕಂಥಾದ್ದು ಕರ್ನಾಟಕಕ್ಕೆ ಆಗೌರವವಾಗಿ, ಕರ್ನಾಟಕದ ನಿರ್ಧಾರವನ್ನು ಬದಲಾಯಿಸಿ, ಕರ್ನಾಟಕದ ಹಿತಚಿಂತನೆಗೆ ವಿರುದ್ಧವಾದಂಥ ಯಾವುದೇ ನಿರ್ಣಯವನ್ನು ಅವರು ಮಾಡಿದರೂ ಕೂಡ ಕಾಯಿದೆ ಪ್ರಕಾರ ಆ ಒಂದು ಮಹಾನಗರಪಾಲಿಕೆಯನ್ನು ರದ್ದುಮಾಡ ಬೇಕು. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳುತ್ತಾ ಇದೇನೆ. ಒಂದು ಕ್ಷಣವೂ ಸಹ ಬಿಡದೆ ಈ ಕೂಡಲೇ ತಾವು ತಂತಿ ಮೂಲಕ ಆ ಮಹಾನಗರಪಾಲಿಕೆಯನ್ನು ರದ್ದುಪಡಿಸಿದ್ದೇನೆ ಎಂದು ಹೇಳಲೇಬೇಕು. ಇಲ್ಲದೇಹೋದರೆ ಇದು ನಿಜವಾಗಲೂ ಕರ್ನಾಟಕಕ್ಕೆ ತೀವ್ರ ಅಪರಾಧವಾಗುತ್ತದೆ, ಬಹಳ ದೊಡ್ಡ ದುರಂತಕ್ಕೆ ಎಡೆ ಕೊಡುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಾ ಇದ್ದೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ನಗರ ಪಾಲಿಕೆಯವರು ಬೆಳಗಾಂ ನಗರವನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆಯಾಗಬೇಕೆಂಬ ಬಗ್ಗೆ ಒಂದು ನಿರ್ಣಯವನ್ನು ಪಾಸುಮಾಡಿದರು ಎನ್ನುವಂತಹ ವಿಚಾರವನ್ನು ನಾನೂ ಕೂಡ ತಿಳಿದುಕೊಂಡಿದ್ದೇನೆ. ಇದು ಅವರು ಮಾಡಿದ್ದು ಹೊಸದೇನೂ ಅಲ್ಲವೆಂದು ನನಗೆ ಅನ್ನಿಸುತ್ತಿದೆ. ಏಕೆಂದರೆ ಆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆ ಭಾಗದಲ್ಲಿ ಅಸ್ತಿತ್ವದಲ್ಲಿದ್ದು ಅವರು ಚಟುವಟಿಕೆ ಏನು ಮಾಡುತ್ತಿದ್ದಾರೆ, ಅದಕ್ಕೆ ಅನುಗುಣವಾಗಿ ಅವರು ಒಂದು ಠರಾವು ಪಾಸು ಮಾಡಿದ್ದಾರೆ. ನಾನು ಅನೇಕ ಸಲ ಮಹಾಜನ್ ವರದಿಯ ಬಗ್ಗೆ, ನಮ್ಮ ಮತ್ತು ಮಹಾರಾಷ್ಟ್ರದ ಗಡಿ ಬಗ್ಗೆ ಸರ್ಕಾರದ ನಿಲುವಿನ ಬಗ್ಗೆ